**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಡಾ: ಟಿ. ತಿಮ್ಮಯ್ಯ ರವರು ಮಂಡಿಸಿರುವ ನಿಯಮ 330 ರಡಿಯ ಗಮನ ಸೆಳೆಯುವ ಸೂಚನೆಗೆ ಉತ್ತರ**

47

**ಪ್ರಶ್ನೆ:**

"ಸರ್ಕಾರದ ಅಧಿಸೂಚನೆ ಸಂಖ್ಯೆ:ಲೋಇ/597/ಸೇಸಎ(ಭಾಗ) ಬೆಂಗಳೂರು ದಿನಾಂಕ: 28.11.2022ರ ಆದೇಶದಂತೆ ಲೋಕೋಪಯೋಗಿ ಇಲಾಖೆಯಲ್ಲಿ ಸಹಾಯಕ ಅಭಿಯಂತರರುಗಳಿಗೆ ಕರ್ನಾಟಕ ನಾಗರೀಕ ಸೇವೆ ನಿಯಮಾವಳಿಗಳ ನಿಯಮ-32 ರಡಿ ಸಹಾಯಕ ಕಾರ್ಯಪಾಲಕ ಅಭಿಯಂತರರ (ವಿಭಾಗ-1)ರ ಹುದ್ದೆಗೆ ಪದೋನ್ನತಿ ನೀಡಿದ್ದು, ಇವರಲ್ಲಿ ಈಗಾಗಲೇ ಕೆಲವು ಅಭಿಯಂತರರುಗಳು ನಿವೃತ್ತಿ ಹೊಂದಿದ್ದು, ಇನ್ನೂ ಕೆಲವರು ನಿವೃತ್ತಿ ಅಂಚಿನಲ್ಲಿರುವುದರಿಂದ ಇವರುಗಳಿಗೆ ಇದುವರೆಗೂ ನಿಯಮ-42 ರಂತೆ ಸ್ಥಾನಪನ್ನ ಮುಂಬಡ್ತಿ ನೀಡದೇ ಇರುವ ಕಾರಣ ಸರ್ಕಾರದ ಸೌಲಭ್ಯಗಳಿಂದ ವಂಚಿತರಾಗುತ್ತಿದ್ದು, ಈ ಅನ್ಯಾಯವನ್ನು ಸರಿಪಡಿಸಲು ನಿಯಮ-32ರಡಿ ಸಹಾಯಕ ಕಾರ್ಯಪಾಲಕ ಅಭಿಯಂತರರಾಗಿ(ವಿಭಾಗ-1) ಪದೋನ್ನತಿ ಹೊಂದಿರುವ ಇವರುಗಳಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ-42 ರಂತೆ ಸ್ಥಾನಪನ್ನ ಮುಂಬಡ್ತಿ ನೀಡುವ ಕುರಿತು ಸಂಪೂರ್ಣ ಮಾಹಿತಿ ಒದಗಿಸುವಂತೆ ನಿಯಮ-330ರಡಿ ಸದನದಲ್ಲಿ ಮಾನ್ಯ ಲೋಕೋಪಯೋಗಿ ಸಚಿವರಲ್ಲಿ ಪ್ರಸ್ತಾಪಿಸ ಬಯಸುತ್ತೇನೆ."

**ಉತ್ತರ:**

ಲೋಕೋಪಯೋಗಿ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ನಿಗಧಿಪಡಿಸಿರುವಂತೆ ಮುಂಬಡ್ತಿ ಕೋಟಾದಲ್ಲಿ ಮೀಸಲಿರಿಸಲಾದ ಹುದ್ದೆಗಳಿಗನುಸಾರವಾಗಿ ವಯೋನಿವೃತ್ತಿ, ಕಡ್ಡಾಯ ನಿವೃತ್ತಿ, ಸ್ವಯಂ ನಿವೃತ್ತಿ ಮತ್ತು ಕಾಲಕಾಲಕ್ಕೆ ಹುದ್ದೆಗಳ ಸೃಜನೆಗಳಿಂದ ಲಭ್ಯವಾಗುವ ರಿಕ್ತಸ್ಥಾನಗಳಿಗೆ ಜೇಷ್ಠತೆಯನುಸಾರ ಅರ್ಹ ಅಭಿಯಂತರರುಗಳ ಅರ್ಹತೆ ಮತ್ತು ಸೂಕ್ತತೆಯನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ ಇವರ ಅಧ್ಯಕ್ಷತೆಯ ಇಲಾಖಾ ಪದೋನ್ನತಿ ಸಮಿತಿ ಸಭೆಯು ಪರಿಶೀಲಿಸಿ ಅರ್ಹರನ್ನು ಕ.ನಾ.ಸೇ.ನಿ. ನಿಯಮ-42ರಡಿ ಸ್ಥಾನಪನ್ನಗೊಳಿಸಲು ನಿಯಮಾನುಸಾರ ಅವಕಾಶವಿರುತ್ತದೆ. ಅದರಂತೆ ಲೋಕೋಪಯೋಗಿ ಇಲಾಖೆಯಲ್ಲಿ ಅಧಿಸೂಚನೆ ಸಂಖ್ಯೆ: ಲೋಇ 205 ಸೇಸಎ 2020, ದಿನಾಂಕ:31.01.2022 ರಲ್ಲಿ ಸ.ಕಾ.ಇಂ(ವಿ-1) ವೃಂದದಲ್ಲಿ ಸೇವಾ ಜೇಷ್ಠತೆಯನುಸಾರ ಜೇ.ಕ್ರ.ಸಂ: 4809 ರವರೆಗಿನ ಅರ್ಹ ಅಭಿಯಂತರರುಗಳಿಗೆ ಕ.ನಾ.ಸೇ.ನಿ. ನಿಯಮ-42ರಡಿ ಸ್ಥಾನಪನ್ನ ಪದೋನ್ನತಿ ನೀಡಲಾಗಿದೆ.

ತದನಂತರ, ಜೇಷ್ಠತಾ ಪಟ್ಟಿಗೆ ಸಂಬಂಧಿಸಿದಂತೆ, ಮಾನ್ಯ ಉಚ್ಚ ನ್ಯಾಯಾಲಯ ಮತ್ತು ಮಾನ್ಯ ಕೆ.ಎ.ಟಿಯಲ್ಲಿ ಅನೇಕ ಪ್ರಕರಣಗಳು ದಾಖಲಾದ ಹಿನ್ನಲೆಯಲ್ಲಿ, ಸರ್ಕಾರದ ಅಧಿಸೂಚನೆ ಸಂಖ್ಯೆ: ಲೋಇ 597 ಸೇಸಎ 2020 (ಭಾಗ), ದಿನಾಂಕ:28.11.2022ರಲ್ಲಿ ಅರ್ಹ ಅಭಿಯಂತರರುಗಳಿಗೆ ಸಹಾಯಕ ಇಂಜಿನಿಯರ್(ವಿಭಾಗ-1) ವೃಂದದಿಂದ ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿಭಾಗ-1) ಹುದ್ದೆಗೆ ಕ.ನಾ.ಸೇ.ನಿ. ನಿಯಮ-32ರಡಿ ಸ್ವತಂತ್ರ ಪ್ರಭಾರದಲ್ಲಿರಿಸಲಾಗಿದೆ.

ಇಲಾಖಾ ಬೇರ್ಪಡೆ ಪ್ರಕ್ರಿಯೆ ನಂತರ ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ವೃಂದದ ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲಾದ ನಂತರ ಸರ್ಕಾರದ ಅಧಿಸೂಚನೆ ಸಂಖ್ಯೆ:ಲೋಇ 44 ಸೇಸಎ 2022, ದಿನಾಂಕ:27.06.2022ನ್ನು ಮತ್ತು ಕೃಷ್ಣಾ ಮೇಲ್ದಂಡೆ ಯೋಜನೆಯಡಿ ನೇಮಕಗೊಂಡ ಅಭಿಯಂತರರುಗಳ ನೇಮಕಾತಿ ಮತ್ತು ಅವರುಗಳು ಲೋಕೋಪಯೋಗಿ ಇಲಾಖೆಯ ಜೇಷ್ಠತಾ ಪಟ್ಟಿಯಲ್ಲಿರುವ ಕುರಿತು ಹಾಗೂ ಬ್ಯಾಕ್‌ಲಾಗ್ ಇಂಜಿನಿಯರುಗಳ ಜೇಷ್ಠತೆ ನಿಗಧಿ ಕುರಿತಂತೆ ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿ ಮತ್ತು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ:23371/2023, 15464/2023, 744/2024, 784/2024 ಕೆ.ಎ.ಟಿ ಅರ್ಜಿ ಸಂಖ್ಯೆ:3122-3135ರ ಆದೇಶದ ಕುರಿತಾದ ರಿಟ್ ಅರ್ಜಿ ಸಂಖ್ಯೆ:20127/2019ಗಳಲ್ಲಿ ಬಾಕಿ ಇದ್ದು, ಅಂತಿಮ ತೀರ್ಪು ಬಾಕಿ ಇರುತ್ತದೆ. ಸದರಿ ಪ್ರಕರಣಗಳು ಮಾನ್ಯ ಉಚ್ಚ ನ್ಯಾಯಲಯದಲ್ಲಿ ಬಾಕಿಯಿರುತ್ತವೆ.

...2..

ಕ.ನಾ.ಸೇ.ನಿ ನಿಯಮ-32ರಡಿ ಸ್ವತಂತ್ರ ಪ್ರಭಾರದಲ್ಲಿರುವ ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿಭಾಗ-1) ಅಧಿಕಾರಿಗಳನ್ನು ಕ.ನಾ.ಸೇ.ನಿ ನಿಯಮ-42ರಡಿ ಸ್ಥಾನಪನ್ನಗೊಳಿಸಿದ ನಂತರ ಜೇಷ್ಠತೆಯನ್ನು ನಿಗಧಿಪಡಿಸಬೇಕಾಗಿದ್ದು, ಮಾನ್ಯ ಉಚ್ಚ ನ್ಯಾಯಾಲಯ ಮತ್ತು ಮಾನ್ಯ ಕೆ.ಎ.ಟಿಯಲ್ಲಿ ಪ್ರಕರಣಗಳು ಮುಂದುವರೆದಿರುವ ಹಿನ್ನೆಲೆಯಲ್ಲಿ ಜೇಷ್ಠತೆಯನ್ನು ನಿಗಧಿಪಡಿಸಲು ಕಷ್ಟಸಾಧ್ಯವಾಗಿರುತ್ತದೆ. ಪ್ರಕರಣಗಳು ಇತ್ಯರ್ಥಗೊಂಡ ನಂತರ ಲೋಕೋಪಯೋಗಿ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಗಳಲ್ಲಿರುವ ಅವಕಾಶದಂತೆ ಹುದ್ದೆಗಳ ಲಭ್ಯತೆಯನುಸಾರ ಕ.ನಾ.ಸೇ.ನಿ ನಿಯಮ-32ರಡಿ ಸ್ವತಂತ್ರ ಪ್ರಭಾರದಲ್ಲಿರುವ ಅಧಿಕಾರಿಗಳನ್ನು ನಿಯಮಾನುಸಾರ ಕ.ನಾ.ಸೇ.ನಿ. ನಿಯಮ-42ರಡಿ ಸ್ಥಾನಪನ್ನಗೊಳಿಸಲು ಕ್ರಮವಹಿಸಲಾಗುವುದು.

**ಕಡತ ಸಂಖ್ಯೆ: ಲೋಇ 350 ಸೇಸಎ 2025**

**(ಸತೀಶ ಜಾರಕಿಹೊಳಿ)**
ಲೋಕೋಪಯೋಗಿ ಸಚಿವರು